KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**



| ಭಾಗ – IV-A | ಬೆಂಗಳೂರು, ಶನಿವಾರ, ಮಾರ್ಚ್ ೧೯, ೨೦೧೧ (ಫಾಲ್ಗುಣ ೨೮, ಶಕ ವರ್ಷ ೧೯೩೨) | ನಂ. ೩೩೬ |
|---|---|---|



**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 12 ಶಾಸನ 2011, ಬೆಂಗಳೂರು, ದಿನಾಂಕ: 19.03.2011**

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2011ಕ್ಕೆ 2011ರ ಮಾರ್ಚ್ ತಿಂಗಳ ಹದಿನೇಳನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2011ರ ಕರ್ನಾಟಕ ಅಧಿನಿಯಮ ಸಂಖ್ಯೆ: 12 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## 2011ರ ಕರ್ನಾಟಕ ಅಧಿನಿಯಮ ಸಂಖ್ಯೆ 12

(2011ರ ಮಾರ್ಚ್ ಹತ್ತೊಂಬತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2011

(2011ರ ಮಾರ್ಚ್ ಹದಿನೇಳನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು 2011ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 4ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,–

(i) (ಎ)ಖಂಡದಲ್ಲಿ (ii)ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ii) ಮೂರನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ಐದರ ದರದಲ್ಲಿ, ಮತ್ತು";

(ii) (ಬಿ)ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) ಈ ಮುಂದಿನವುಗಳ ಸಂಬಂಧದಲ್ಲಿ, ಎಂದರೆ:-

(i) ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 74) 14ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಘೋಷಿಸಲಾದ ಸರಕುಗಳ ಸಂಬಂಧದಲ್ಲಿ ಸದರಿ ಅಧಿನಿಯಮದ 15ನೇ ಪ್ರಕರಣದ ಅಡಿಯಲ್ಲಿ ಅಂಥ ಸರಕುಗಳಿಗೆ ನಿರ್ದಿಷ್ಟಪಡಿಸಿದ ಗರಿಷ್ಠ ದರದಲ್ಲಿ;

(ii) ಸಿಗರೇಟುಗಳು, ಸಿಗಾರ್‌ಗಳು, ಗುಟ್ಕಾ ಮತ್ತು ಇತರ ತಂಬಾಕು ತಯಾರಿಕೆಗಳ ಸಂಬಂಧದಲ್ಲಿ ಶೇಕಡಾ ಹದಿನೈದರ ದರದಲ್ಲಿ;

(iii) ಇತರ ಸರಕುಗಳ ಸಂಬಂಧದಲ್ಲಿ ಶೇಕಡಾ ಹದಿನಾಲ್ಕರ ದರದಲ್ಲಿ,"

**3. 21ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 21ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"21. ತೆರಿಗೆಯ ಮರುಪಾವತಿ.-** ವಿಶ್ವಸಂಸ್ಥೆಯ ವಿಶೇಷ ಏಜೆನ್ಸಿಗಳು, ವಿಶ್ವಸಂಸ್ಥೆಗಳ (ವಿಶೇಷ ಹಕ್ಕುಗಳು ಮತ್ತು ರಕ್ಷಣೆಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಅಡಿಯಲ್ಲಿ ಅಧಿಸೂಚಿಸಲ್ಪಟ್ಟ ಬಹುಮುಖ ಆರ್ಥಿಕ ಸಂಘಗಳು ಮತ್ತು ಸಂಸ್ಥೆಗಳು ಹಾಗೂ ಅಧಿಸೂಚಿಸಬಹುದಾದಂಥ ವಾಣಿಜ್ಯದೌತ್ಯ ಕಛೇರಿಗಳು ಅಥವಾ ರಾಯಭಾರಿ ಕಛೇರಿಗಳನ್ನು ಹೊರತುಪಡಿಸಿದಂತೆ ಇತರ ದೇಶಗಳ ವಾಣಿಜ್ಯದೌತ್ಯ ಕಛೇರಿಗಳು ಮತ್ತು ರಾಯಭಾರಿ ಕಛೇರಿಗಳಿಂದ ಮಾಡಿದ, ನಿಯಮಿಸಬಹುದಾದ ವರ್ಗದ ಖರೀದಿಗಳ ಮೇಲೆ, ಈ ಅಧಿನಿಯಮದಡಿಯಲ್ಲಿ ಸಂಗ್ರಹಿಸಿದ ತೆರಿಗೆಯನ್ನು ನಿಯಮಿಸಬಹುದಾದಂಥ ವಿಧಾನ ಮತ್ತು ಷರತ್ತುಗಳಿಗೆ ಒಳಪಟ್ಟು ಮರುಪಾವತಿ ಮಾಡತಕ್ಕದ್ದು."

**4. 25ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 25ನೇ ಪ್ರಕರಣದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಅರ್ಜಿಯನ್ನು ವಿದ್ಯುನ್ಮಾನದ ಮೂಲಕ ಸಲ್ಲಿಸಬೇಕಾದ ವೆಬ್‌ಸೈಟನ್ನು ಆಯುಕ್ತನು ಅಧಿಸೂಚಿಸಬಹುದು."

**5. 31ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 31ನೇ ಪ್ರಕರಣದಲ್ಲಿ,-

(i) (4)ನೇ ಉಪಪ್ರಕರಣದಲ್ಲಿ "ಅರವತ್ತು ಲಕ್ಷ ರೂಪಾಯಿಗಳನ್ನು" ಎಂಬ ಪದಗಳಿಗೆ "ಒಂದು ನೂರು ಲಕ್ಷ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (6)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**6. 37ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 37ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಶೇಕಡಾ ಒಂದೂಕಾಲು" ಎಂಬ ಪದಗಳಿಗೆ "ಶೇಕಡಾ ಒಂದೂವರೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 40ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 40ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ,-

(ಎ) (ಎ)ಖಂಡದಲ್ಲಿ "ಐದು ವರ್ಷಗಳು" ಎಂಬ ಪದಗಳಿಗೆ "ನಾಲ್ಕು ವರ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಈ ಮುಂದಿನ ಪರಂತುಕವನ್ನು ಕೊನೆಯಲ್ಲಿ ಸೇರಿಸತಕ್ಕದು, ಎಂದರೆ:-

"ಪರಂತು, 2007ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಯಾವುದೇ ತೆರಿಗೆಯ ಅವಧಿಗೆ ಸಂಬಂಧಿಸಿದ ತೆರಿಗೆ ನಿರ್ಧರಣೆ ಅಥವಾ ತೆರಿಗೆಯ ಮರು ನಿರ್ಧರಣೆಯನ್ನು ನಿಯಮಿಸಲಾದ ತೆರಿಗೆಯ ಅವಧಿಯು ಕೊನೆಗೊಂಡ ತರುವಾಯ ಐದು ವರ್ಷಗಳ ಅವಧಿಯೊಳಗೆ ಮಾಡತಕ್ಕದ್ದು."

(ii) (2)ನೇ ಉಪಪ್ರಕರಣದಲ್ಲಿ "ಐದು ವರ್ಷಗಳಿಗೆ ಎಂಬುದನ್ನು ಹತ್ತು ವರ್ಷಗಳಿಗೆ ಎಂದು ಉಲ್ಲೇಖಿಸಿದ್ದರೆ" ಎಂಬ ಪದಗಳಿಗೆ "ನಾಲ್ಕು ವರ್ಷಗಳಿಗೆ ಎಂಬುದನ್ನು ಎಂಟು ವರ್ಷಗಳಿಗೆ ಎಂದು ಉಲ್ಲೇಖಿಸಿದ್ದರೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 53ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 53ನೇ ಪ್ರಕರಣದ (12)ನೇ ಉಪಪ್ರಕರಣದಲ್ಲಿ, (ಎ)ಖಂಡದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ವಿಧಿಸಬಹುದಾದ ತೆರಿಗೆಯ ದರವು ಶೇಕಡಾ ನಾಲ್ಕಕ್ಕಿಂತ ಕಡಿಮೆ ಇರುವ ಯಾವುದೇ ಸರಕುಗಳ ಸಂಬಂಧದಲ್ಲಿ (ii) ನೇ ಉಪಖಂಡದ ಅಡಿಯಲ್ಲಿ ವಿಧಿಸಬಹುದಾದ ದಂಡವು, ವಿಧಿಸಬಹುದಾದ ತೆರಿಗೆಯ ಮೊಬಲಗಿನ ಐದರಷ್ಟಕ್ಕೆ ಸಮನಾಗಿರತಕ್ಕದ್ದು."

**9. 54ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 54ನೇ ಪ್ರಕರಣದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ವಾಹನದ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ಯಾವೊಬ್ಬ ಇತರ ವ್ಯಕ್ತಿಯು ಸಲ್ಲಿಸಬೇಕಾದ ಅವಶ್ಯಕ ಮಾಹಿತಿಯನ್ನು ಸಲ್ಲಿಸಬೇಕಾದ ವೆಬ್‌ಸೈಟನ್ನು ಆಯುಕ್ತನು ಅಧಿಸೂಚಿಸಬಹುದು."

**10. 62ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 62ನೇ ಪ್ರಕರಣದ (4)ನೇ ಉಪಪ್ರಕರಣದ (ಡಿ)ಖಂಡದಲ್ಲಿ "ಒಂದುನೂರ ಇಪ್ಪತ್ತು ದಿನಗಳ" ಎಂಬ ಪದಗಳಿಗೆ "ಎರಡುನೂರ ನಲವತ್ತು ದಿನಗಳ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**11. ಎರಡನೇ ಅನುಸೂಚಿಯ ತಿದ್ದುಪಡಿ.–** ಮೂಲ ಅಧಿನಿಯಮದ ಎರಡನೇ ಅನುಸೂಚಿಯಲ್ಲಿ ಕ್ರಮ ಸಂಖ್ಯೆ 2 ಮತ್ತು 3ಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**12. ಮೂರನೇ ಅನುಸೂಚಿಯ ತಿದ್ದುಪಡಿ.–** ಮೂಲ ಅಧಿನಿಯಮದ ಮೂರನೇ ಅನುಸೂಚಿಯಲ್ಲಿ,-

(i) ಕ್ರಮ ಸಂಖ್ಯೆ 5ಕ್ಕೆ ಸಂಬಂಧಿಸಿದ ನಮೂದುಗಳಲ್ಲಿ "ಅಡಿಗೆ ತಯಾರಿಸಲು ಉಪಯೋಗಿಸುವ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) ಕ್ರಮ ಸಂಖ್ಯೆ 30ಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**13. ಆರನೇ ಅನುಸೂಚಿಯ ತಿದ್ದುಪಡಿ.–** ಮೂಲ ಅಧಿನಿಯಮದ ಆರನೇ ಅನುಸೂಚಿಯಲ್ಲಿ,-

(i) ಕ್ರಮ ಸಂಖ್ಯೆ 7ಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

(ii) ಕ್ರಮ ಸಂಖ್ಯೆ 12ಕ್ಕೆ ಸಂಬಂಧಿಸಿದ ನಮೂದುಗಳಲ್ಲಿ, 3ನೇ ಅಂಕಣದಲ್ಲಿ "ಶೇಕಡಾ ನಾಲ್ಕು" ಎಂಬ ಪದಗಳಿಗೆ "ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ(1956ರ ಕೇಂದ್ರ ಅಧಿನಿಯಮ 74) 15ನೇ ಪ್ರಕರಣದಲ್ಲಿ ಘೋಷಿಸಲಾದ ಸರಕುಗಳಿಗೆ ನಿರ್ದಿಷ್ಟಪಡಿಸಿದಂಥ ಗರಿಷ್ಠ ದರದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) ಕ್ರಮ ಸಂಖ್ಯೆ 23ಕ್ಕೆ ಸಂಬಂಧಿಸಿದ ನಮೂದುಗಳಲ್ಲಿ, 3ನೇ ಅಂಕಣದಲ್ಲಿ "ಶೇಕಡಾ ಹದಿಮೂರುವರೆ" ಎಂಬ ಪದಗಳಿಗೆ "ಶೇಕಡಾ ಹದಿನಾಲ್ಕು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ3) (400 ಪ್ರತಿಗಳು)